ಶ್ರೀ ಸಿ.ಎಂ.ಉದಾಸಿ:- ಇಷ್ಟೆಲ್ಲ ಕೆಲಸ ಮಾಡಿಸಿದರೂ ಕೂಡ ಮಾಡಿಸಿಲ್ಲವೆಂದು ಹೇಳುತ್ತಿರುವುದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಎ.ಮಂಜು:- ಈ ಕೆಲಸವನ್ನು ನಂಜುಂಡಪ್ಪ ವರದಿ ಮೇಲೆ ಮಾಡಿದ್ದೀರಿ. ಇದು ರೊಟೀನ್ ವರ್ಕ್ ಆಗಿದೆ. ಇದಕ್ಕೆ ತಾವು ಸ್ಪೆಷಲ್ ಗ್ರ್ಯಾಂಟ್ ಕೊಟ್ಟಿಲ್ಲ. ನೀವು ಹೆಚ್ಚಿಗೆ ಒಂದು ಪೈಸೆ ಸಹ ಇದಕ್ಕಾಗಿ ಕೊಟ್ಟಿಲ್ಲ.

ಶ್ರೀ ಸಿ.ಎಂ.ಉದಾಸಿ:-ಈಗ ಮಾಡಿಸುತ್ತೇನೆಂದು ಹೇಳಿದ್ದೇನೆ.

ಶ್ರೀ ಎ.ಮಂಜು:- ದಯವಿಟ್ಟು ಈ ಬಗ್ಗೆ ಸದನದಲ್ಲಿ ಹೇಳಿ.

ಶ್ರೀ ಸಿ.ಎಂ.ಉದಾಸಿ:- SHDPಯಲ್ಲಿ ಸೇರಿಸಿ ಮಾಡಿಸುವಂಥ ಕೆಲಸವನ್ನು ಮಾಡುತ್ತೇನೆ.

ಶ್ರೀ ಎ.ಮಂಜು:- ಧನ್ಯವಾದಗಳು.

8.ವಿಷಯ:- ಅಂಗನವಾಡಿ ಕಾರ್ಯಕರ್ತರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ.

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ):- ಮಾನ್ಯ ಉಪಾಧ್ಯಕ್ಷರೆ,ಅಂಗನವಾಡಿ ಕಾರ್ಯಕರ್ತರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕಳಕಪ್ಪ ಜಿ.ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):- ರಾಜ್ಯದಲ್ಲಿ 64518 ಅಂಗನವಾಡಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಈ ಕೇಂದ್ರಗಳಲ್ಲಿ 62306 ಅಂಗನವಾಡಿ ಕಾರ್ಯಕರ್ತೆಯರು, 57575 ಅಂಗನವಾಡಿ ಸಹಾಯಕಿಯರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು ಗೌರವಧನದ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು, 2011–12ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ರೂ.1500/– ಹಾಗೂ ಅಂಗನವಾಡಿ ಸಹಾಯಕಿಯರಿಗೆ ರೂ.750/– ಹೆಚ್ಚಿಸಿರುತ್ತದೆ. ರಾಜ್ಯ ಸರ್ಕಾರವೂ ಸಹ ಕಾರ್ಯಕರ್ತೆಯರಿಗೆ ರೂ.500/–, ಅಂಗನವಾಡಿ ಸಹಾಯಕಿಯರಿಗೆ ರೂ.250/–ನ್ನು ಹೆಚ್ಚಿಸಿರುತ್ತದೆ.

ಪ್ರಸ್ತುತ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ನೀಡುತ್ತಿರುವ ಗೌರವಧನ

	ಕೇಂದ್ರ ಸರ್ಕಾರ	ರಾಜ್ಯ ಸರ್ಕಾರ	ಒಟ್ಟು
ಅಂಗನವಾಡಿ ಕಾರ್ಯಕರ್ತೆ	ರೂ.3,000/–	ರೂ.1,500/–	ರೂ.4,500/–
ಅಂಗನವಾಡಿ ಸಹಾಯಕಿ	ರೂ.1,500/–	ರೂ.750/–	ರೂ.2250/–

ಅಂಗನವಾಡಿ ಕಾರ್ಯಕರ್ತೆ/ಅಂಗನವಾಡಿ ಸಹಾಯಕಿಯರನ್ನು ಖಾಯಂಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:07.12.2006ರ ಸರ್ವೋಚ್ಚನ್ಯಾಯಾಲಯದ ಆದೇಶದಲ್ಲಿ ಅಂಗನವಾಡಿ ಕಾರ್ಯಕರ್ತೆ/ಅಂಗನವಾಡಿ ಸಹಾಯಕಿಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಸಾಧ್ಯವಿಲ್ಲವೆಂದುತಿಳಿಸಿರುವುದರಿಂದಇವರನ್ನು ಖಾಯಂಗೊಳಿಸಲು ಸಾಧ್ಯವಿರುವುದಿಲ್ಲ.

ರಾಜ್ಯ ಸರ್ಕಾರವು ಇವರು ಸಲ್ಲಿಸುತ್ತಿರುವ ಸೇವೆಯನ್ನು ಮನಗಂಡು ಈ ಕೆಳಕಂಡ ಸೇವೆ/ ಸೌಲಭ್ಯಗಳನ್ನು ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ನೀಡುತ್ತಿದೆ.

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರು ಮೃತಪಟ್ಟಲ್ಲಿ ಅವರ ಕುಟುಂಬದವರಿಗೆ ರೂ.20,000/–, ಸಹಾಯಕಿಯರಿಗೆ ರೂ.10,000/–ಗಳ ಮರಣ ಪರಿಹಾರ ನೀಡಲಾಗುತ್ತದೆ. ಸೇವೆಯಲ್ಲಿರುವಾಗ ಗುರುತರವಾದ ಕಾಯಿಲೆಗಳ ಚಿಕಿತ್ಸೆಗೆ ಕಾರ್ಯಕರ್ತೆಯರಿಗೆ ವಾರ್ಷಿಕ ರೂ.20,000/–, ಸಹಾಯಕಿಯರಿಗೆ ರೂ.10,000/– ವೈದ್ಯಕೀಯ ವೆಚ್ಚ ಮರುಪಾವತಿ ಮಾಡಲಾಗುತ್ತದೆ.

ಸೇವಾವಧಿಯಲ್ಲಿ ಗರಿಷ್ಟ 2 ಬಾರಿ 135 ದಿನಗಳು ಹೆರಿಗೆ ರಜೆ ಸೌಲಭ್ಯ, ವರ್ಷಕ್ಕೆ 20 ದಿನಗಳ ಸಾಂದರ್ಭಿಕ ರಜೆ, 15 ದಿನಗಳ ಬೇಸಿಗೆ ರಜೆಯನ್ನು ನೀಡಲಾಗುತ್ತಿದೆ.

ಪ್ರತಿದಿನ ಅಂಗನವಾಡಿ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ನೀಡಲಾಗುತ್ತಿರುವಂತೆ ಇವರಿಗೂ ರೂ.5.75/–ರ ವೆಚ್ಚದ ಪೂರಕ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ.

ಮೇಲ್ವಿಚಾರಕಿಯರ ನೇಮಕಾತಿಯಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ ಶೇ.30 ರಷ್ಟನ್ನು ಎಸ್.ಎಸ್.ಎಲ್.ಸಿ. ಪಾಸಾದ 7 ವರ್ಷ ಸೇವೆ ಸಲ್ಲಿಸಿದ ಹಾಗೂ ಶೇ.10 ರಷ್ಟು ಹುದ್ದೆಗಳನ್ನು ಪದವೀಧರರಾದ 5 ವರ್ಷ ಸೇವೆ ಸಲ್ಲಿಸಿದ ಅಂಗನವಾಡಿ ಕಾರ್ಯಕರ್ತೆಯರಿಗೆ ನೀಡಲಾಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆ/ಅಂಗನವಾಡಿ ಸಹಾಯಕಿಯರಿಗೆ ವಂತಿಗೆ ಆಧಾರಿತ NPS Liteಯೋಜನೆಯಡಿ ಪಿಂಚಣಿ ಸೌಲಭ್ಯವನ್ನು ನೀಡಿ ಇವರ ಮಾಸಿಕ ಒಟ್ಟಾರೆ ವಂತಿಗೆಯಲ್ಲಿ ಶೇ.50 ರಷ್ಟು ಪಾಲನ್ನು ರಾಜ್ಯ ಸರ್ಕಾರವೇ

ಭರಿಸುತ್ತಿದೆ. ಸದರಿ ಯೋಜನೆಯಡಿ ನಿವೃತ್ತಿ ನಂತರ ಅಂಗನವಾಡಿ ಕಾರ್ಯಕರ್ತೆಯರಿಗೆ ಕನಿಷ್ಠ ಮಾಸಿಕ ರೂ.500/– ಹಾಗೂ ಅಂಗನವಾಡಿ ಸಹಾಯಕಿಯರಿಗೆ ಕನಿಷ್ಟ ಮಾಸಿಕ ರೂ.350/– ಪಿಂಚಣಿ ಸಿಗುತ್ತದೆ. ಈ ಸೌಲಭ್ಯಕ್ಕೆ ಒಳಪಡದ 55–60 ವರ್ಷ ಹಾಗೂ 60 ವರ್ಷಕ್ಕೂ ಮೇಲ್ಪಟ್ಟ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಅವರು ನಿವೃತ್ತರಾಗುವ ವೇಳೆಗೆ ಕ್ರಮವಾಗಿ ರೂ.50,000/– ಹಾಗೂ ರೂ.30,000/– ಗಳ ಇಡಿಗಂಟನ್ನು ಸರ್ಕಾರವೇ ನೀಡುತ್ತಿದೆ.

ಉತ್ತಮ ಸೇವೆ ಸಲ್ಲಿಸಿದ ಅಂಗನವಾಡಿ ಕಾರ್ಯಕರ್ತೆಯರನ್ನು ಗುರುತಿಸಿ ರಾಜ್ಯ ಮಟ್ಟದಲ್ಲಿ ಮತ್ತು ರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ವರ್ಷಕ್ಕೆ 2 ಜೊತೆ ಸಮವಸ್ತ್ರವನ್ನು ನೀಡಲಾಗುತ್ತಿದೆ.

ಶ್ರೀ ಕಿಮ್ಮನೆ ರತ್ನಾಕರ್:- ಮಾನ್ಯ ಉಪಾಧ್ಯಕ್ಷರೆ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರು ಅನೇಕ ವರ್ಷಗಳಿಂದ ಗಿಷ ಬೇಡಿಕೆ-ಗಳನ್ನು ಇಟ್ಟುಕೊಂಡು ರಾಜ್ಯದಾದ್ಯಂತ ಪ್ರತಿಭಟನೆ ಮಾಡುತ್ತಿದ್ದಾರೆ.ಹಾಗೆಯೇ ನಮ್ಮ ಸಂಬಳವನ್ನು ೧೦ ಸಾವಿರ ರೂಪಾಯಿ ಮಾಡಬೇಕೆಂದು ಸಹ ಒತ್ತಾಯ ಕೂಡ ಮಾಡುತ್ತಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಒಟ್ಟು ಎಷ್ಟು ಹಣ ಕೊಡಲಾಗುತ್ತದೆ ಎಂಬ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಉತ್ತರದಲ್ಲಿ ಕೊಟ್ಟಿದ್ದಾರೆ. ಆದರೆ, ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ,ಅವರ ಸಂಬಳವನ್ನು ೧೦,೦೦೦ ರೂಪಾಯಿ ಮಾಡಬೇಕೆಂಬರಾಜ್ಯದಾದ್ಯಂತ ಹಲವಾರು ವರ್ಷಗಳಿಂದ ಬೇಡಿಕೆ ಇಟ್ಟುಕೊಂಡು ಹೋರಾಟ ಮಾಡುತ್ತಿದ್ದಾರೆ. ಆದ್ದರಿಂದ, ಅದರ ಬಗ್ಗೆ ಒಂದು ಭರವಸೆಯನ್ನು ಈ ಸದನದಲ್ಲಿ ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕಳಕಪ್ಪ ಜಿ.ಬಂಡಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ೬೪೫೧೮ ಅಂಗನವಾಡಿ ಕೇಂದ್ರಗಳು

ಕಾರ್ಯನಿರ್ವಹಿಸುತ್ತಿದ್ದು,ಈ ಕೇಂದ್ರಗಳಲ್ಲಿ ೬೬೩೦೭ ಅಂಗನವಾಡಿ ಕಾರ್ಯಕರ್ತೆಯರು,೫೭೫೭೫ ಅಂಗನವಾಡಿ ಸಹಾಯಕಿಯರು ಕಾರ್ಯ-ನಿರ್ವಹಿಸುತ್ತಿದ್ದಾರೆ. ಅಂಗನವಾಡಿ ಕಾರ್ಯಕರ್ತೆಯರು ಗೌರವಧನದ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು, ೨೦೧೧-೧೨ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ಅಂಗನವಾಡಿ ಕಾರ್ಯಕರ್ತೆಯರಿಗೆ ಗೌರವಧನ ರೂ.೧೫೦೦/- ಹಾಗೂಅಂಗ ನವಾಡಿ ಸಹಾಯಕಿಯರಿಗೆ ರೂ.೭೫೦/- ಹೆಚ್ಚಿಸಿರುತ್ತದೆ. ರಾಜ್ಯ ಸರ್ಕಾರವೂ ಸಹ ಕಾರ್ಯಕರ್ತೆಯರಿಗೆ ರೂ.೫೦೦/-ಅಂಗನವಾಡಿ ಸಹಾಯಕಿಯರಿಗೆ ರೂ.೨೫೦/-ನ್ನು ಹೆಚ್ಚಿಸಿರುತ್ತದೆ. ಪ್ರಸ್ತುತ ಅಂಗನವಾಡಿ ಕಾರ್ಯಕರ್ತೆಗೆ ಕೇಂದ್ರ ಸರ್ಕಾರ ೩,೦೦೦ ಮತ್ತು ರಾಜ್ಯ ಸರ್ಕಾರ೧,೫೦೦ ಒಟ್ಟು ೪,೫೦೦ ರೂಪಾಯಿ ಮತ್ತು ಅಂಗನವಾಡಿ ಸಹಾಯಕಿಯರಿಗೆ ಕೇಂದ್ರ ಸರ್ಕಾರ ೧,೫೦೦ ರೂಪಾಯಿ ಮತ್ತು ರಾಜ್ಯ ಸರ್ಕಾರ ೭೫೦/- ಒಟ್ಟು ೨೨೫೦ ರೂಪಾಯಿಗಳ ಗೌರವಧನವನ್ನು ಕೊಡುತ್ತಿವೆ.ಅಂಗನವಾಡಿ ಕಾರ್ಯಕರ್ತೆ/ಅಂಗನವಾಡಿ ಸಹಾಯಕಿಯರನ್ನು ಖಾಯಂಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ:೦೭.೧೨.೨೦೦೬ರ ಸರ್ವೋಚ್ಚ ನ್ಯಾಯಾಲಯದ ಆದೇಶದಲ್ಲಿ ಅಂಗನವಾಡಿ ಕಾರ್ಯಕರ್ತೆ/ಅಂಗನವಾಡಿ ಸಹಾಯಕಿಯರನ್ನು ಸರ್ಕಾರಿ ನೌಕರರೆಂದು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುವುದರಿಂದ ಇವರನ್ನು ಖಾಯಂಗೊಳಿಸಲು ಸಾಧ್ಯವಿರುವುದಿಲ್ಲ. ರಾಜ್ಯ ಸರ್ಕಾರವು ಇವರು ಸಲ್ಲಿಸುತ್ತಿರುವ ಸೇವೆಯನ್ನು ಮನಗಂಡು ಅವರಿಗೆ ಅನೇಕ ಸೌಲಭ್ಯಗಳನ್ನು ನಮ್ಮ ಇಲಾಖೆಯಿಂದ ಕೊಡುತ್ತಿದ್ದೇವೆ.ಅಂಗನಾಡಿ ಕಾರ್ಯಕರ್ತೆ-ಯರು ಮೃತಪಟ್ಟದಲ್ಲಿ ಅವರ ಕುಟುಂಬದವರಿಗೆರೂ.೨೦,೦೦೦ಮತ್ತು ಸಹಾಯಕಿ-ಯರಿಗೆ ರೂ.೧೦,೦೦೦ ಗಳನ್ನು ಮರಣ ಪರಿಹಾರ ನೀಡಲಾಗುತ್ತದೆ. ಮತ್ತೆ ಸೇವಾವಧಿಯಲ್ಲಿ ಗರಿಷ್ಠ ೨ ಬಾರಿ ೧೫೫ ದಿನಗಳು ಹೆರಿಗೆ ರಜೆ ಸೌಲಭ್ಯ, ವರ್ಷಕ್ಕೆ ೨೦ ದಿನಗಳ ಸಾಂದರ್ಭಿಕ ರಜೆಯನ್ನು ಕೊಡುತ್ತಿದ್ದೇವೆ. ಇವರಿಗೆ ಸುಮಾರು

೧೦,೦೦೦ ರೂಪಾಯಿ ಕೊಡಬೇಕೆಂದು ಸನ್ಮಾನ್ಯ ಸದಸ್ಯರು ಹೇಳಿದರು. ಈಗಿನ ಮಟ್ಟಕ್ಕೆ ಅದನ್ನುಕೊಡುವುದಕ್ಕೆ ಸಾಧ್ಯವಿಲ್ಲ.ಏಕೆಂದರೆ,ಅವರಿಗೆ ಕಳೆದವರ್ಷ ಹೆಚ್ಚಿಸಿರುವುದ-ರಿಂದ ಈಗ ಇದನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕಿಮ್ಮನೆ ರತ್ನಾಕರ್:- ಮಾನ್ಯ ಉಪಾಧ್ಯಕ್ಷರೆ, ಈ ಬಗ್ಗೆ ಮಾನ್ಯ ಸಚಿವರು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಳಕಪ್ಪ ಜಿ.ಬಂಡಿ:- ಆಯಿತು.

9.ವಿಷಯ:- ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರುಗಳನ್ನು ಖಾಯಂಗೊಳಿಸುವ ಬಗ್ಗೆ

ಶ್ರೀ ಸುನೀಲ್ ವಿ.ಹೆಗಡೆ(ಹಳಿಯಾಳ) :-ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ದಿನಗೂಲಿ ನೌಕರರುಗಳನ್ನು ಖಾಯಂಗೊಳಿಸುವ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ನಗರಾಭಿವೃದ್ಧಿ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ):- ಮಾನ್ಯ ಉಪಾಧ್ಯಕ್ಷರೆ, ಸರ್ವೋಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: 8307–11/83ರಲ್ಲಿ ದಿನಾಂಕ 23.2.1990ರಂದು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 2 ಎಸ್ಎಲ್ಸಿ 90, ದಿನಾಂಕ 6.8.1990ನ್ನು ಹೊರಡಿಸಲಾಗಿದ್ದು, ಸದರಿ ಆದೇಶದ ಪ್ರಕಾರ ಸರ್ಕಾರದ ವಿವಿಧ ಇಲಾಖೆಗಳಲ್ಲಿ ದಿನಾಂಕ 1.7.1984ರಂದು ಅಥವಾ ಅದಕ್ಕಿಂತ ಹಿಂದೆ ತೊಡಗಿಸಲಾದ ಸಾಂದರ್ಭಿಕ/ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸಲಾಗಿದೆ. ಈ ಆದೇಶದಲ್ಲಿ ದಿನಾಂಕ 1.7.1984ರ ನಂತರ ಸಾಂದರ್ಭಿಕ/ ದಿನಗೂಲಿ ಆಧಾರದ ಮೇಲೆ ಮಾಡಿರುವ ಎಲ್ಲಾ ನೇಮಕಾತಿಗಳು ಸ್ವಯಂಚಾಲಿತವಾಗಿ ರದ್ದಾಗುವುದೆಂದು ಆದೇಶಿಸಲಾಗಿತ್ತು. ಆದರೆ, ಉಚ್ಚ ನ್ಯಾಯಾಲಯವು 1990 ಮತ್ತು 1993ರಲ್ಲಿ ತಡೆಯಾಜ್ಞೆ ನೀಡಿದ್ದರಿಂದ ಇವರುಗಳ ಸೇವೆಯನ್ನು ಮುಂದುವರೆಸಲಾಗಿದೆ.